**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ**
**ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಚಿಕ್ಕಮಗಳೂರು.**

ಸಿ.ಸಿ.ನಂ.1852/2022

ದಿನಾಂಕಃ 06.01.2026

ಪಿರ್ಯಾದುದಾರರು: ರಾಜ್ಯದ ಪರವಾಗಿ ನಗರ ಪೋಲೀಸರು,
ಚಿಕ್ಕಮಗಳೂರು.

ವಿರುದ್ಧ

ಆರೋಪಿತರುಃ 1. ಶ್ರೀಮತಿ ಇಂದಿರಾ
ಬಿನ್ ಲೇಟ್ ಸಿದ್ದಪ್ಪಶೆಟ್ಟಿ
ವಯಸ್ಸು ಸುಮಾರು 45 ವರ್ಷ,
ವಾಸಃ ಆಶ್ರಯಮನೆ ಬಡಾವಣೆ,
ಕಲ್ಯಾಣನಗರ, ಚಿಕ್ಕಮಗಳೂರು.

2. ಶರತ್ ಕೆ.ಎಸ್.
ಬಿನ್ ಲೇಟ್ ಸಿದ್ದಪ್ಪಶೆಟ್ಟಿ
ವಯಸ್ಸು ಸಮಾರು 25 ವರ್ಷ,
ವಾಸಃ ಆಶ್ರಯಮನೆ ಬಡಾವಣೆ,
ಕಲ್ಯಾಣನಗರ, ಚಿಕ್ಕಮಗಳೂರು.

ದಂಡ ಪ್ರಕ್ರಿಯ ಸಂಹಿತೆ ಕಲಂಃ 313 ರ ಅಡಿಯಲ್ಲಿ ಆರೋಪಿ ಹೇಳಿಕೆ

1. ಅಭಿಯೋಜನೆಯವರ ಪರ ಸಾಕ್ಷಿ ವಿಚಾರಣೆಯನ್ನು ಕೇಳಿರುವಿಯಾ?

   ಉತ್ತರ :

2. ಪ್ರಾಸಾ-3 ಉಮಾದೇವಿ ಎಸ್.ಎ., ಉಪ ನೋಂದಣಾಧಿಕಾರಿ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 22.06.2020 ರಂದು ಪೊಲೀಸರಿಂದ ಮನವಿ ಬಂದಿದ್ದು, ಅದನ್ನು ತಮ್ಮ ಕಛೇರಿಯಲ್ಲಿ ಸ್ವೀಕರಿಸಲಾಗಿದ್ದು, ಅದಕ್ಕೆ ಸಂಬಂಧಪಟ್ಟಂತೆ ದಿಃ06.07.2020 ರಂದು

ಪತ್ರವ್ಯವಹಾರವನ್ನು ಮಾಡಿ ಅದಕ್ಕೆ ಸಹಿ ಮಾಡಿ ಕೊಟ್ಟಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರ :

3. ಫ್ರಾಸಾ-4 ಎಲ್.ಜೆ. ಶಿವಸ್ವಾಮಿ, ನಿವೃತ್ತ ಎಎಸ್ಐ ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ ದಿನಾಂಕಃ 21.01.2019 ರಂದು ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ದೂರನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ಸಂಖ್ಯೆ: 10/2019 ರಂತೆ ಪ್ರಕರಣ ದಾಖಲಿಸಿಕೊಂಡಿದ್ದು, ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದಾಗಿ, ನಂತರ ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-11 ರವರಿಗೆ ವಹಿಸಿಕೊಟ್ಟಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರ :

4. ಫ್ರಾಸಾ-5 ಜಗದೀಶ್ ಡಿ.ಹೆಚ್. ಡಾಕ್ಯೂಮೆಂಟ್ ರೈಟರ್ ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ ದಿನಾಂಕಃ 07.01.2016 ರಂದು ಧನಲಕ್ಷ್ಮಿ ಎನ್ನುವವರಿಂದ ಸುಬ್ರಹ್ಮಣ್ಯ ಎನ್ನುವವರು ಚಿಕ್ಕಮಗಳೂರಿನ ಕಲ್ಯಾಣನಗರದಲ್ಲಿರುವ ಮನೆ ನಂ.22 ನ್ನು ಖರೀದಿ ಮಾಡಿದ್ದು, ಈ ಬಗ್ಗೆ ಕ್ರಯಪತ್ರವನ್ನು ತಯಾರು ಮಾಡಿಕೊಟ್ಟಿದ್ದಾಗಿ, ಸದರಿ ಕ್ರಯಪತ್ರಕ್ಕೆ ಧರ್ಮೇಗೌಡ ಹಾಗೂ ಹೇಮಂತ್ ಎನ್ನುವವರು ಸಾಕ್ಷಿಯಾಗಿ ತನ್ನ ಸಮಕ್ಷಮ ಸಹಿಯನ್ನು ಮಾಡಿದ್ದಾಗಿ, ಅದೇ ರೀತಿ ಸದರಿ ಕ್ರಯಪತ್ರಕ್ಕೆ ಧನಲಕ್ಷ್ಮಿ, ಸುಬ್ರಹ್ಮಣ್ಯ ಹಾಗೂ ಧನಲಕ್ಷ್ಮಿರವರ ಮಗ ತನ್ನ ಸಮಕ್ಷಮ ಸಹಿ ಮಾಡಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರ :

5. ಫ್ರಾಸಾ-6 ನಾಗೇಂದ್ರ ನಾಯಕ್, ಪಿಎಸ್ಐ ಇವರು ತಮ್ಮ ಮುಂದುವರೆದ ನುಡಿ ಸಾಕ್ಷ್ಯದಲ್ಲಿ ದಿನಾಂಕಃ 16.06.2022 ರಂದು ಚಾಸಾ-12 ರವರಿಂದ ಮುಂದಿನ ತನಿಖೆಗಾಗಿ ಈ ಕೇಸಿನ ಕಡತವನ್ನು ಪಡೆದಿದ್ದಾಗಿ, ಅದೇ ದಿನ ಪೌರಾಯುಕ್ತರು, ಚಿಕ್ಕಮಗಳೂರು ನಗರಸಭೆರವರಿಗೆ ಈ ಸ್ವತ್ತು ಹಾಗೂ ಹಕ್ಕುಪತ್ರ ವಿಚಾರವಾಗಿ ನೈಜತೆ ಬಗ್ಗೆ ಮಾಹಿತಿಯನ್ನು ಕೋರಿ ಮನವಿಯನ್ನು ಸಲ್ಲಿಸಿದ್ದಾಗಿ, ದಿಃ 16.11.2022 ರಂದು ತನಿಖೆಯನ್ನು ಮುಕ್ತಾಯಗೊಳಿಸಿ

ಆರೋಪಿತರಾದ ನಿಮ್ಮ ವಿರುದ್ಧ ದೋಷಾರೋಪಣೆ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರಃ

6. ನೀವು ಈ ಕೇಸಿನಲ್ಲಿ ಹೆಚ್ಚಿಗೆ ಏನನ್ನಾದರು ಹೇಳುವುದಿದೆಯೇ?

ಉತ್ತರಃ

7. ನೀವು ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿ ವಿಚಾರಣೆ ಮಾಡಿಸುತ್ತೀರಾ ಅಥವಾ ಯಾವುದಾದರೂ ದಾಖಲೆ ಹಾಜರುಪಡಿಸುತ್ತೀರಾ?

ಉತ್ತರಃ

ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಓದಿ ಕೇಳಿ, ಅವರು ಕೊಟ್ಟ ಉತ್ತರಗಳನ್ನು ನಾನೇ ಸ್ವತಃ ಬರೆದುಕೊಂಡಿರುವುದು ನಿಜವಾಗಿದೆ ಎಂದು ಧೃಡೀಕರಿಸುತ್ತೇನೆ.

Sd/-
[ಕುಮಾರಿ ಸುಜಾತ ]
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ ಮು.ನ್ಯಾದಂ., ಚಿಕ್ಕಮಗಳೂರು.